# ಸಿಪಿಸಿಆರ್‌ಐಯಲ್ಲಿ ಕೃಷಿಕರಿಗೆ ಶಿಬಿರ

ಕಾಸರಗೋಡು: ಕಾಸರಗೋಡು ಸಿಪಿಸಿಆರ್‌ಐಯಲ್ಲಿ ನಡೆದ ಕೃಷಿ ತರಬೇತಿ ತರತಿಯನ್ನು ಕಾಸರಗೋಡು ಶಾಸಕ ಎನ್.ಎ.ನೆಲ್ಲಿಕುನ್ನು ಉದ್ಘಾಟಿಸಿ ಮಾತನಾಡಿದರು. ಯುವಕರು ಕೃಷಿಯಲ್ಲಿ ಭಾಗವಹಿಸಬೇಕಾದ ಅಗತ್ಯದ ಬಗ್ಗೆ ಅವರು ವಿವರಿಸಿದರು. ಕೃಷಿಕರ ಉತ್ಪನ್ನಕ್ಕೆ ನ್ಯಾಯಬೆಲೆ ಸಿಗಬೇಕಾಗಿದೆ ಎಂದು ಹೇಳಿದರು.

ಇದೇ ವೇಳೆ ನವದೆಹಲಿಯಲ್ಲಿ ಜರಗಿದ ಕೃಷಿ ಉನ್ನತಿ ಮೇಳವನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಉದ್ಘಾಟಿಸುವ ಕಾರ್ಯಕ್ರಮವನ್ನು ಸಿಪಿಸಿಆರ್‌ಐಯಲ್ಲಿ ವೆಬ್‌ಕಾಸ್ಟ್ ಮಾಡಲಾಯಿತು. ಮೊಗ್ರಾಲ್ ಪುತ್ತೂರು ಗ್ರಾಮ ಪಂಚಾಯತ್ ಅಧ್ಯಕ್ಷ ಎ.ಎ.ಜಲೀಲ್ ಅಧ್ಯಕ್ಷತೆ ವಹಿಸಿದ್ದರು. ಸಿಪಿಸಿಆರ್‌ಐ ನಿರ್ದೇಶಕ ಡಾ.ಪಿ.ಚೌಡಪ್ಪ ಸ್ವಾಗತಿಸಿ, ಡಾ.ಕೆ. ಮುರಳೀಧರನ್ ವಂದಿಸಿದರು.